ಕರ್ನಾಟಕ ಸರ್ಕಾರ

(ಕನ್ನಡ ಮತ್ತು ಸಂಸ್ಕೃತಿ ಇಲಾಖೆ)

# ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು,ಸಿದ್ದಾರ್ಥ ನಗರ, ಮೈಸೂರು

Chamarajendra Government College of Visual Arts, Siddarthanagara, Mysuru

## ಛಾಯಚಿತ್ರ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ ವಿಭಾಗ

### ಶ್ರೀ ಮಹೇಂದ್ರ ಸಿಂಹ ಖ್ಯಾತ ಛಾಯಾಚಿತ್ರ ಕಲಾವಿದರು ಬೆಂಗಳೂರು ಇವರಿಂದ ಛಾಯಾಚಿತ್ರ ದೃಶ್ಯ ನಿರ್ಮಾಣ ಕಾರ್ಯಗಾರ 2022-23

ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ) ಸಂಸ್ಥೆಯ ಛಾಯಾಚಿತ್ರ ಮತ್ತು ಛಾಯಾ ಪತ್ರಿಕೋದ್ಯಮ ವಿಭಾಗವು ಶ್ರೀ ಮಹೇಂದ್ರ ಸಿಂಹ, ಖ್ಯಾತ ಛಾಯಾಚಿತ್ರ ಕಲಾವಿದರು, ಬೆಂಗಳೂರು ಹಾಗೂ ಸಂಪನ್ಮೂಲ



ವ್ಯಕ್ತಿಗಳು ಇವರಿಂದ ದಿನಾಂಕ 10.07.2023 ಮತ್ತು 11.07.2023 ರಂದು ಛಾಯಾಚಿತ್ರ ಮತ್ತು ಚಲನಚಿತ್ರ ತಯಾರಿಕೆ ಕುರಿತು ಎರಡು ದಿನಗಳ ಕಾರ್ಯಗಾರವನ್ನು ಆಯೋಜಿಸಿ ಯಶಸ್ವಿಗೊಳಿಸಲಾಯಿತು.



ಕಾರ್ಯಗಾರದಲ್ಲಿ ಛಾಯಾಚಿತ್ರ ಮತ್ತು ಛಾಯಾ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಪ್ರಾಯೋಗಿಕವಾಗಿ ದೃಶ್ಯ ನಿರ್ಮಾಣ ಕಲೆಯನ್ನು ಕಲಿಸಿಕೊಟ್ಟರು.



ಸಿನಿಮಾ ಮತ್ತು ಛಾಯಾಚಿತ್ರ ತಯಾರಿಕೆಯಲ್ಲಿ ತಂತ್ರಜ್ಞಾನ ಮತ್ತು ತಾಂತ್ರಿಕ ಸೌಲಭ್ಯಗಳ ಮೇಲೆ ಅವಲಂಬಿತವಾಗದೆ ಲಭ್ಯ ಸೌಲಭ್ಯಗಳೊಂದಿಗೆ ಕ್ರಿಯಾಶೀಲತೆಯನ್ನು ಬಳಸಿ ಕೌಶಲ್ಯವನ್ನು ಹೆಚ್ಚಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಿನಿಮಾದಲ್ಲಿ ಒಂದು ದೃಶ್ಯವನ್ನು ಚಿತ್ರಿಸುವ ವಿಧಾನವನ್ನು ವಿದ್ಯಾರ್ಥಿಗಳಿಂದ ಪ್ರಾಯೋಗಿಕವಾಗಿ ಮಾಡಿಸುವ ಮೂಲಕ ತಿಳಿಸಿಕೊಟ್ಟರು. ವಿದ್ಯಾರ್ಥಿಗಳಿಂದಲೇ ಬೆಳಕಿನ ವಿನ್ಯಾಸ, ಕ್ಯಾಮೆರಾ ನಿರ್ವಹಣೆ, ನಟನೆಗಳನ್ನು ಮಾಡಿಸಿ ವಿವಿಧ



ಶಾಟ್ ಗಳಾದ ಲಾಂಗ್ ಶಾಟ್, ಮಿಡ್ ಶಾಟ್ ಮತ್ತು ಕ್ಲೋಸಪ್ ಶಾಟ್ ಗಳನ್ನು ಚಿತ್ರಿಸುವ ರೀತಿ ಮತ್ತು ಅದರ ಅಗತ್ಯ, ಉದ್ದೇಶಗಳ ಬಗ್ಗೆ ವಿವರಣೆ ನೀಡಿದರು. ವಿದ್ಯಾರ್ಥಿಗಳೊಂದಿಗೆ ಸಂವಾದ ಮೂಲಕ ತಾಂತ್ರಿಕತೆ ಮತ್ತು ಕಕೌಶಲ್ಯತೆ ಇತರ ಛಾಯಚಿತ್ರ ಕುರಿತ ಅನೇಕ ಸಲಹೆ ನೀಡಿದರು.

ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಸೂಕ್ಷ್ಮವಾಗಿ ಅರ್ಥೈಸಿಕೊಂಡು ವಿದ್ಯಾರ್ಥಿಗಳಿಗೆ ಮನಮುಟ್ಟುವಂತ ವಿಧಾನಗಳಲ್ಲಿ ಛಾಯಾಚಿತ್ರ ಮತ್ತು ದೃಶ್ಯ ನಿರ್ಮಾಣ ಕಲೆಯನ್ನು ವಿವರಿಸಿದರು. ಕಾರ್ಯಗಾರದಲ್ಲಿ ಛಾಯಾಚಿತ್ರ ಮತ್ತು



ಛಾಯಾಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ವೀರಣ್ಣ ಅರ್ಕಸಾಲಿ ಹಾಗೂ ಅತಿಥಿ ಉಪನ್ಯಾಸಕರು ಉಪಸ್ಥಿತರಿದ್ದರು.



~@~